ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೆರಡನೆಯ ಅಧಿವೇಶನ
ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ಅರಣ್ಯ ಇಲಾಖೆಯಲ್ಲಿರುವ ಹುದ್ದೆಗಳು

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-

528(698) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅರಣ್ಯ ಇಲಾಖೆಯಲ್ಲಿ ದಿನಾಂಕ:01.01.1957 ರಿಂದ 31.10.2020ರವರೆಗೆ ಮಂಜೂರಾದ ಮತ್ತು ಸೃಜಿಸಿರುವ ಮತ್ತು ವೃತ್ತಗಳಿಗೆ ಹಂಚಿಕೆ ಮಾಡಿರುವ ಹುದ್ದೆಗಳು ಎಷ್ಟು ;

(ಆ) ಪ್ರಸ್ತುತ 13 ವೃತ್ತದಲ್ಲಿ ಸರ್ಕಾರದ ಆದೇಶದಂತೆ ಮಂಜೂರಾಗಿರುವ ಸ್ಥಳೀಯ ಮತ್ತು ಸ್ಥಳೀಯೇತರ ಮೀಸಲಾತಿಯ ಹುದ್ದೆಯ ವಿವರವನ್ನು ಸಂಖ್ಯೆಯೊಂದಿಗೆ ಸರ್ಕಾರದ ಆದೇಶದ ಪ್ರತಿಯೊಂದಿಗೆ ನೀಡುವುದು ;

(ಇ) ಕೊಡಗು, ಬೆಳಗಾಂ, ಶಿವಮೊಗ್ಗ ಮತ್ತು ಮೈಸೂರು ವೃತ್ತದಲ್ಲಿ ದಿನಾಂಕ:30.11.2001ರಂದು ಹಂಚಿಕೆ/ಮಂಜೂರು /ಸೃಜಿಸಿರುವ ಕಾರಣದಿಂದ ವೃತ್ತದಲ್ಲಿ ಲಭ್ಯವಿದ್ದ ಒಟ್ಟು ಹುದ್ದೆಯ ಸಂಖ್ಯೆ ಎಷ್ಟು; ಮತ್ತು ಇದರ ಆದೇಶದ ಪ್ರತಿಯನ್ನು ನೀಡುವುದು;

(ಈ) ಮಂಗಳೂರು, ಚಿಕ್ಕಮಗಳೂರು, ಧಾರವಾಡ ಮತ್ತು ಚಾಮರಾಜನಗರ ವೃತ್ತದಲ್ಲಿ ದಿನಾಂಕ:01.12.2021ರಂದು ಸರ್ಕಾರಿ ಆದೇಶದಂತೆ ಹೊಸ ವೃತ್ತ ಸೃಜನೆಯಾದಾಗ ಹಂಚಿಕೆ/ಮಂಜೂರು/ಸೃಜಿಸಿರುವ ಹಾಗೂ ಕರ್ತವ್ಯ ನಿರ್ವಹಿಸುತ್ತಿದ್ದ ಉಪವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರ /ವನಪಾಲಕರುಗಳು ಎಷ್ಟು ? (ಜಾತಿ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವನಪಾಲಕರಾಗಿ ಮುಂಬಡ್ತಿ ಅಥವಾ ನೇರ ನೇಮಕಾತಿಯಾದ ದಿನಾಂಕ, ಬಡ್ತಿ ಹೊಂದಿದ್ದರೆ ಸ್ಥಾನಪನ್ನ /ಪ್ರಭಾರ ಇವುಗಳ ಪೂರ್ಣ ಮಾಹಿತಿಯೊಂದಿಗೆ ಸರ್ಕಾರಿ ಆದೇಶದ ಪ್ರತಿಯನ್ನು ನೀಡುವುದು)